31–12–2004 ರವರೆಗಿನ ಬಿಜಾಪುರ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳ ವರ್ಗವಾರು ವಿವರ

ಕ್ರ.ಸಂ.	ಹೆಸರು	ಘಟಕಗಳ ಸಂಖ್ಯೆ
1.	ಆಹಾರ ಮತ್ತು ಪಾನೀಯಗಳು	1691
2.	ಜವಳಿ ಮತ್ತು ಸಿದ್ಧ ಉಡುಪುಗಳು	782
3.	ಮರ ಮತ್ತು ಸಾಮಗ್ರಿಗಳು	516
4.	ಮುದ್ರಣ ಮತ್ತು ಸಾಮಗ್ರಿಗಳು	119
5.	ಚರ್ಮ ಮತ್ತು ಚರ್ಮೋತ್ಪನ್ನಗಳು	436
6.	ರಬ್ಬರ್ ಮತ್ತು ಪ್ಲಾಸ್ಟಿಕ್ಸ್	60
7.	ರಾಸಾಯನಿಕ ಮತ್ತು ರಾಸಾಯನಿಕ ವಸ್ತುಗಳು	65
8.	ಗ್ಲಾಸ್ ಅಂಡ್ ಸಿರಾಮಿಕ್ಸ್	73
9.	ಬೇಸಿಕ್ ಮೆಟಲ್	76
10.	ಜನರಲ್ ಇಂಜಿನಿಯರಿಂಗ್	448
11.	ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್	194
12.	ಆಟೋಮೊಬೈಲ್ಸ್	78
13.	ಸಾರಿಗೆ ಮತ್ತು ಉಪಕರಣಗಳು	58
14.	ಫೆರಸ್ ಮತ್ತು ನಾನ್ ಫರಸ್	–
15.	ಜಾಬ್ ವರ್ಕ್ ರಿಪೇರಿ ಮತ್ತು ಸರ್ವೀಸಿಂಗ್	522
16.	ಇತರೆ ಸೇವೆಗಳು	241
17.	ಇತರೆ	240
	ಒಟ್ಟು :	**5599**

402(1097) : ಶ್ರೀ ಅಪ್ಪ ಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರದಲ್ಲಿರುವ ಮೆಟ್ರಿಕ್ ನಂತರದ ಹಾಗೂ ಮೆಟ್ರಿಕ್ ಪೂರ್ವ ಪರಿಶಿಷ್ಟ ಜಾತಿ ಬಾಲಕರ ಮತ್ತು ಬಾಲಕಿಯರ ಸಂಖ್ಯಾ ಬಲ ಎಷ್ಟು :

ಆ) ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸಂಖ್ಯಾ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ॥ ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು)

ಅ) ಬಿಜಾಪುರ ಜಿಲ್ಲೆಯ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ನಡೆಸಲಾಗುತ್ತಿರುವ ವಿದ್ಯಾರ್ಥಿನಿಲಯಗಳ ಮತ್ತು ಅದರಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ.	ವಿದ್ಯಾರ್ಥಿನಿಲಯದ ವಿವರ	ವಿದ್ಯಾರ್ಥಿನಿಲಯಗಳ ಸಂಖ್ಯೆ			ವಿದ್ಯಾರ್ಥಿಗಳ ಸಂಖ್ಯೆ		
		ಬಾಲಕರು	ಬಾಲಕಿಯರು	ಒಟ್ಟು	ಬಾಲಕ	ಬಾಲಕಿಯರು	ಒಟ್ಟು
1	ಸರ್ಕಾರಿ ಮೆಟ್ರಿಕ್ ಪೂರ್ವ	44	10	54	2190	475	2665

2	ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು	25	–	25	586	–	886
3	ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು	3	2	5	250	100	350
4	ಮಾನ್ಯತೆ ಪಡೆದ ಸ್ವಯಂ ಸೇವಾ ಸಂಸ್ಥೆಗಳಿಂದ ನಡೆಸಲ್ಪಡುವ ಖಾಸಗಿ ಕಾಲೇಜು ವಿದ್ಯಾರ್ಥಿ ನಿಲಯಗಳು	11	–	11	393	–	393
	ಒಟ್ಟು	83	12	953719		3754294	

ಇ) ಬಿಜಾಪುರ ತಾಲ್ಲೂಕು ಕೇಂದ್ರದಲ್ಲಿರುವ ಸರ್ಕಾರಿ ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯಾ ಬಲ ಹೆಚ್ಚಿಸಲು ಬೇಡಿಕೆ ಇದ್ದು ಅನುದಾನದ ಲಭ್ಯತೆಗೊಳಪಟ್ಟು ಪರಿಶೀಲಿಸಲಾಗುವುದು.

407(1125) : ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಕಬ್ಬು ಬೆಳೆಗಾರರಿಗೆ ವಿವಿಧ ಸಕ್ಕರೆ ಕಾರ್ಖಾನೆಗಳಿಂದ ಬರಬೇಕಾಗಿರುವ ಬಾಕಿ ಮೊತ್ತವೆಷ್ಟು (ಕಾರ್ಖಾನೆವಾರು ಬಾಕಿ ವಿವರ ನೀಡುವುದು);

ಆ) ರೈತರಿಗೆ ಬಾಕಿ ಹಣ ಪಾವತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

ಇ) ನಿಗದಿತ ಕಾಲ ಮಿತಿಯೊಳಗೆ ಈ ರೈತರಿಗೆ ಬಾಕಿ ಹಣ ಪಾವತಿ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೆ;

ಈ) ಸರ್ಕಾರ 2002-03ರ ಆಯವ್ಯಯ ದಲ್ಲಿ ಘೋಷಿಸಿದಂತೆ ಸಕ್ಕರೆ ಅಭಿವೃದ್ಧಿ ನಿಧಿ ಸ್ಥಾಪಿಸಿದೆಯೇ, ಸ್ಥಾಪಿಸಿದ್ದಲ್ಲಿ ಮೀಸಲಿಟ್ಟಿರುವ ಹಣವೆಷ್ಟು ?

ಉ) ಮೀಸಲಿಟ್ಟಿರುವ ಹಣದಿಂದ ಕೈಗೆತ್ತಿಕೊಂಡಿರುವ ಕಾರ್ಯಕ್ರಮಗಳೇನು;

ಊ) ಸ್ಥಾಪನೆಯಾಗದಿದ್ದಲ್ಲಿ ಅದಕ್ಕೆ ಕಾರಣಗಳೇನು ಈ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಅಮರೇಗೌಡ. ಎಲ್ ಪಾಟೀಲ್ ಬಯ್ಯಾಪುರ (ಸಕ್ಕರೆ ಸಚಿವರು)

ಅ) ರಾಜ್ಯದ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳಿಂದ ಒಟ್ಟು ರೂ. 307.87 ಕೋಟಿ ಬರ ಬೇಕಾಗಿದೆ. (ಕಾರ್ಖಾನೆವಾರು ಬಾಕಿ ವಿವರ ಲಗತ್ತಿಸಿದೆ)

ಆ) ಬಹುತೇಕ ಸಕ್ಕರೆ ಕಾರ್ಖಾನೆಗಳು ನಿಗದಿತ ಸಮಯದಲ್ಲಿ ಕಬ್ಬು ಬೆಲೆ ಬಾಕಿ ಮೊತ್ತವನ್ನು ಪಾವತಿಸುತ್ತಿವೆ. ಬಾಕಿ ಉಳಿಸಿಕೊಂಡಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಕೂಡಲೇ ಪಾವತಿಸುವಂತೆ ಸೂಚನೆ ನೀಡಲಾಗಿದೆ. ಅನಿವಾರ್ಯತೆ ಇದ್ದ ಕೆಲವೊಂದು ಪ್ರಕರಣಗಳಲ್ಲಿ ಕಬ್ಬು (ನಿಯಂತ್ರಣ) ಆದೇಶ 1966ರನ್ವಯ ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಾತಿ ಮಾಡಲು ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕ್ರಮ ವಹಿಸಿರುತ್ತಾರೆ.

ಇ) ನಿಗದಿತ ಕಾಲಮಿತಿಯೊಳಗೆ ರೈತರಿಗೆ ಬಾಕಿ ಹಣ ಪಾವತಿ ಮಾಡಲು ಕಾರ್ಖಾನೆಗಳಿಗೆ ಸೂಚನೆ ನೀಡಲಾಗಿದೆ.